ಆ) ವಿಚಾರಣೆ ಮುಕ್ತಾಯ ಆದ ನಂತರ ನಿಯಮಾನುಸಾರ ಮುಂದಿನ ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಗುವುದು.

ಲೋವರ ಮುಲ್ಲಾಮಾರಿ ನದಿಗೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ

605 (272) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ಜಟ್ಟೂರ ಗ್ರಾಮದ ಹತ್ತಿರ ಲೋವರ ಮುಲ್ಲಾಮರಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಬಂದಿದೆ.

ಆ) ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಜಟ್ಟೂರ ಗ್ರಾಮದ ಹತ್ತಿರ ಲೋವರ್ ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಗೆ ರೂ.461.50 ಲಕ್ಷಗಳ ನಬಾರ್ಡ್ (ಆರ್ ಐ.ಡಿ.ಎಫ್–10) ಸಹಾಯ ಧನ ದೊರೆತಿದ್ದು, ಅದರಂತೆ ಅಂದಾಜು ಪಟ್ಟಿಯನ್ನು ದರಪಟ್ಟಿ 2004–05 ರಂತೆ ರೂ. 650.00 ಲಕ್ಷಗಳಿಗೆ ತಯಾರಿಸಿ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಗೆ ಸಲ್ಲಿಸಿದಾಗ, ಸಮಿತಿಯು ಪರಿಶೀಲಿಸಿ ಕಾಮಗಾರಿಯನ್ನು ತೆಗೆದುಕೊಂಡಲ್ಲಿ ಒಟ್ಟು ಬ್ಯಾಕ್ ವಾಟರ್ ನಿಲ್ಲುವ ಸಾಮರ್ಥ್ಯ 3.30 ಕಿ.ಮೀ. ಇದ್ದು, ಅದರಲ್ಲಿ ಆಂಧ್ರ ಪ್ರದೇಶಕ್ಕೆ 2.00 ಕಿ.ಮಿ. ಬ್ಯಾಕ್ ವಾಟರ್ ನಿಲ್ಲಲಿದ್ದು, ಕರ್ನಾಟಕಕ್ಕೆ ಕೇವಲ 1.30 ಕಿ.ಮಿ. ಬ್ಯಾಕ್ ವಾಟರ್ ನಿಲ್ಲುವುದಾಗಿ ಇದು ಅಂತರ ರಾಜ್ಯ ಬ್ಯಾರೇಜ್ ಎಂದು ಪರಿಗಣಿಸಿ ಸರ್ಕಾರದಿಂದ ಅನುಮೋದನೆ ಪಡೆಯಲು ಅಭಿಪ್ರಾಯ ಪಟ್ಟಿರುತ್ತಾರೆ. ಇಂತಹ ಸಮಸ್ಯೆಯಿಂದ ನಬಾರ್ಡ್ ಸಹಾಯ ಧನ ರೂ.461.50 ಲಕ್ಷ ಹಿಂಪಡೆದ ಕಾರಣ ಸದರಿ ಬಿ.ಸಿ.ಬಿ. ಕೈಬಿಡಲಾಗಿತ್ತು. ಸದರಿ ಬ್ಯಾರೇಜನ್ನು ಎ.ಐ.ಬಿ.ಪಿ. ಯೋಜನೆಯಡಿ ತೆಗೆದುಕೊಳ್ಳುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುವುದು.